## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ನೋಂದಣಿ ಮತ್ತು ಮುದ್ರಾಂಕ ಇಲಾಖೆಯ ಕೆಲವು ಸೇವೆಗಳನ್ನು ಬೆಂಗಳೂರು-ಒನ್ ಕೇಂದ್ರಗಳ ಮೂಲಕ ಸಾರ್ವಜನಿಕರಿಗೆ ನೀಡುವ ಕುರಿತು.

ಓದಲಾಗಿದೆ: ನೊಂದಣಿ ಮಹಾಪರಿವೀಕ್ಷಕರ ಹಾಗೂ ಮುದ್ರಾಂಕಗಳ ಆಯುಕ್ತರವರ ಪತ್ರ ಸಂಖ್ಯೆ: Comp/12/2010-11
ದಿನಾಂಕ: 11.06.2010

*****

**ಪ್ರಸ್ತಾವನೆ:**

ಮೇಲೆ ಓದಲಾದ ದಿನಾಂಕ: 11.06.2010ರ ಪತ್ರದಲ್ಲಿ ದಿನಾಂಕ: 23.03.2010 ಹಾಗೂ 01.04 2010ಗಳಂದು ಪ್ರಧಾನ ಕಾರ್ಯದರ್ಶಿ, ಸಿ.ಆ.ಸು(ಇ-ಆಡಳಿತ) ಇಲಾಖೆರವರ ಅಧ್ಯಕ್ಷತೆಯಲ್ಲಿ ಜರುಗಿದ ಸಭೆಯಲ್ಲಿ ನೋಂದಣಿ ಮತ್ತು ಮುದ್ರಾಂಕ ಇಲಾಖೆಯ ಸೇವೆಗಳಾದ (1) ಋಣಭಾರ ಪ್ರಮಾಣ ಪತ್ರ ನೀಡಿಕೆ, (2) ಪುಸ್ತಕ-1ರ ದಸ್ತಾವೇಜುಗಳ ದೃಢೀಕೃತ ನಕಲು ಪ್ರತಿ ನೀಡಿಕೆ, ಮತ್ತು (3) ವಿವಾಹ ಪ್ರಮಾಣ ಪತ್ರಗಳ ಪ್ರತಿ ನೀಡಿಕೆ ಸೇವೆಗಳನ್ನು ಬೆಂಗಳೂರು ಉಪ-ನೋಂದಣಿ ಕಛೇರಿಗಳಿಗೆ ಮಾತ್ರ ಸೀಮಿತಗೊಂಡಂತೆ ಬೆಂಗಳೂರು-ಒನ್ ಕೇಂದ್ರಗಳ ಮೂಲಕ ಸಾರ್ವಜನಿಕರಿಗೆ ನೀಡಲು ತೀರ್ಮಾನಿಸಲಾಗಿರುತ್ತದೆ. ಸದರಿ ಸೇವೆಗಳನ್ನು ನೀಡುವುದಕ್ಕೆ ಸಂಬಂಧಿಸಿದ ತಂತ್ರಾಂಶವನ್ನು ಪ್ರಧಾನ ಕಾರ್ಯದರ್ಶಿ, ಸಿ.ಆ.ಸು(ಇ-ಆಡಳಿತ) ಇಲಾಖೆರವರ ಸೂಚನೆ ಮೇರೆಗೆ ಮೆ:ರಾಮ್ ಇನ್‌ಫೋಟೆಕ್ ರವರು ಅಭಿವೃದ್ಧಿ ಪಡಿಸಿರುತ್ತಾರೆ. ಸದರಿ ಸೇವೆಗಳನ್ನು ಬೆಂಗಳೂರು-ಒನ್ ಕೇಂದ್ರಗಳ ಮೂಲಕ ನೀಡುವ ಕುರಿತು ತೀರ್ಮಾನಿಸಲಾಗಿರುವ ಕಾರ್ಯ ವಿಧಾನ ಹಾಗೂ ವಿವರಗಳನ್ನು ನೀಡಿರುತ್ತಾರೆ. ಈ ಸೇವೆಗಳನ್ನು ನೀಡುವುದಕ್ಕಾಗಿ ಬೆಂಗಳೂರು-ಒನ್ ಕೇಂದ್ರಕ್ಕೆ ಸೇವಾ ಶುಲ್ಕವನ್ನು ಪಾವತಿಸಬೇಕಾಗಿರುತ್ತದೆ. ಬೆಂಗಳೂರು-ಒನ್ ಕೇಂದ್ರವು ಸಾರ್ವಜನಿಕರಿಂದ ಸಂಗ್ರಹಿಸುವ ಸೇವಾ ಶುಲ್ಕದ ದರಗಳನ್ನು ಪ್ರಧಾನ ಕಾರ್ಯದರ್ಶಿ, ಸಿ.ಆ.ಸು(ಇ-ಆಡಳಿತ) ಇಲಾಖೆರವರು ಈ ಕೆಳಕಂಡಂತೆ ನೀಡುರುತ್ತಾರೆಂದು ಸದರಿ ದರಗಳನ್ನು ಒಪ್ಪಬಹುದಾಗಿದ್ದು, ಈ ಕುರಿತು ಸೂಕ್ತ ಆದೇಶ ನೀಡುವಂತೆ ಕೋರಿರುತ್ತಾರೆ.

| ಕ್ರಮ ಸಂಖ್ಯೆ | ಸೇವೆಗಳು | ನಿಗಧಿ ಪಡಿಸಿರುವ ಸೇವಾ ಶುಲ್ಕ |
|---|---|---|
| 1. | ಋಣಭಾರ ಪ್ರಮಾಣ ಪತ್ರ | ಪ್ರತಿ ಆಸ್ತಿಗೆ (2 ಪುಟಗಳು) ರೂ. 8/- ಹೆಚ್ಚುವರಿ ಪುಟಗಳು ಪ್ರತಿ ಪುಟಕ್ಕೆ ರೂ.2/- ರಂತೆ |
| 2. | ಪುಸ್ತಕ-1ರಲ್ಲಿ ನೋಂದಾಯಿಸಿದ ದಸ್ತಾವೇಜುಗಳ ದೃಢೀಕೃತ ನಕಲು ಪ್ರತಿ | ಪ್ರತಿ ಆಸ್ತಿಗೆ (2 ಪುಟಗಳು) ರೂ. 8/- ಹೆಚ್ಚುವರಿ ಪುಟಗಳು ಪ್ರತಿ ಪುಟಕ್ಕೆ ರೂ. 2/- ರಂತೆ |
| 3. | ವಿವಾಹಗಳ ನೋಂದಣಿ ಪ್ರಮಾಣ ಪತ್ರ | ಪ್ರತಿ ಪ್ರಮಾಣ ಪತ್ರಕ್ಕೆ ರೂ. 8/- |

...2...

082
ಸ್ವೀಕೃತಿ ಸಂಖ್ಯೆ: 636
ದಿನಾಂಕ: 30/07/11

ಪ್ರಸ್ತಾವನೆಯನ್ನು ಪರಿಶೀಲಿಸಿದ ನಂತರ ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರಿ ಆದೇಶ ಸಂಖ್ಯೆ: ಕಂಇ 143 ಮುನೋಮು 2010,**
**ಬೆಂಗಳೂರು ದಿನಾಂಕ: 27.07.2011**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ ನೋಂದಣಿ ಮತ್ತು ಮುದ್ರಾಂಕ ಇಲಾಖೆಯ ಈ ಕೆಳಕಾಣಿಸಿದ ಸೇವೆಗಳನ್ನು ಬೆಂಗಳೂರು-ಒನ್ ಕೇಂದ್ರಗಳ ಮೂಲಕ ಸಾರ್ವಜನಿಕರಿಗೆ ನೀಡುಲು ಮತ್ತು ಸದರಿ ಸೇವೆಗಳಿಗೆ ಅವುಗಳ ಮುಂದೆ ತಿಳಿಸಿರುವ ದರಗಳಂತೆ ಸೇವಾ ಶುಲ್ಕಗಳನ್ನು ನಿಗಧಿ ಪಡಿಸಿ ಪಡೆಯಲು ಮಂಜೂರಾತಿ ನೀಡಿ ಆದೇಶ ಹೊರಡಿಸಲಾಗಿದೆ.

| ಕ್ರಮ ಸಂಖ್ಯೆ | ಸೇವೆಗಳು | ನಿಗಧಿ ಪಡಿಸಿರುವ ಸೇವಾ ಶುಲ್ಕ |
|---|---|---|
| 1. | ಋಣಭಾರ ಪ್ರಮಾಣ ಪತ್ರ | ಪ್ರತಿ ಆಸ್ತಿಗೆ (2 ಪುಟಗಳು) ರೂ. 8/- ಹೆಚ್ಚುವರಿ ಪುಟಗಳು ಪ್ರತಿ ಪುಟಕ್ಕೆ ರೂ.2/- ರಂತೆ |
| 2. | ಪುಸ್ತಕ-1ರಲ್ಲಿ ನೋಂದಾಯಿಸಿದ ದಸ್ತಾವೇಜುಗಳ ದೃಢೀಕೃತ ನಕಲು ಪ್ರತಿ | ಪ್ರತಿ ಆಸ್ತಿಗೆ (2 ಪುಟಗಳು) ರೂ. 8/- ಹೆಚ್ಚುವರಿ ಪುಟಗಳು ಪ್ರತಿ ಪುಟಕ್ಕೆ ರೂ. 2/- ರಂತೆ |
| 3. | ವಿವಾಹಗಳ ನೋಂದಣಿ ಪ್ರಮಾಣ ಪತ್ರ | ಪ್ರತಿ ಪ್ರಮಾಣ ಪತ್ರಕ್ಕೆ ರೂ. 8/- |

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಟಿ.ಕೆ.ರಾಮಚಂದ್ರ)
ಸರ್ಕಾರದ ಅಧೀನ ಕಾರ್ಯದರ್ಶಿ,
ಕಂದಾಯ ಇಲಾಖೆ
(ನೋಂದಣಿ ಮತ್ತು ಮುದ್ರಾಂಕ)

ಇವರಿಗೆ:

1) ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2) ಸರ್ಕಾರದ ಪ್ರಧಾನ ಕಾರ್ಯದರ್ಶಿ, ಸಿಆಸುಇ (ಇ-ಆಡಳಿತ). ಬಹುಮಹಡಿಗಳ ಕಟ್ಟಡ, ಬೆಂಗಳೂರು.
3) ನೋಂದಣಿ ಮಹಾಪರಿವೀಕ್ಷಕರು ಹಾಗೂ ಮುದ್ರಾಂಕಗಳ ಆಯುಕ್ತರು, ಬೆಂಗಳೂರು.
4) ಸರ್ಕಾರದ ಕಾರ್ಯದರ್ಶಿಗಳು, ಕಂದಾಯ ಇಲಾಖೆ ಇವರ ಪತ್ರಾಂಕಿತ ಆಪ್ತ ಸಹಾಯಕರು.
5) ಸರ್ಕಾರದ ಉಪ ಕಾರ್ಯದರ್ಶಿ, ಕಂದಾಯ ಇಲಾಖೆ ಇವರ ಆಪ್ತ ಸಹಾಯಕರು.
6) ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.